# ಎನ್ಐಟಿಕೆ: ಸೆಮಿ ಕಂಡಕ್ಟರ್ ಮಹತ್ವ ಉತ್ಪಾದನೆಗೆ ಪ್ರೋತ್ಸಾಹ; ಕಾರ್ಯಾಗಾರ



**ಸುರತ್ಕಲ್, ಮಾ. 20:** ಸೆಮಿಕಂಡಕ್ಟರ್ ಉದ್ಯಮದಲ್ಲಿನ ವೈವಿಧ್ಯಮಯ ವೃತ್ತಿ ಅವಕಾಶಗಳ ಬಗ್ಗೆ ಬೆಳಕು ಚೆಲ್ಲುವ ಕಾರ್ಯಾಗಾರ, ಮಾಹಿತಿ ನೀಡುವ ಕಾರ್ಯ ಕ್ರಮ ಸುರತ್ಕಲ್ ಎನ್ಐಟಿಕೆಯುಲ್ಲಿ ಜರಗಿತು.

ಖಾಸಗಿ ಕಂಪೆನಿ ನಿರ್ದೇಶಕ ರತ್ನಾಕರ್ ಎಸ್. ಭಟ್ ತಾಂತ್ರಿಕ ಉಪನ್ಯಾಸ ನೀಡಿ, ಭಾರತದಲ್ಲಿ ಐಟಿ ಸೆಕ್ಟರ್ ಜತೆಗೆ ಇದೀಗ ಸೆಮಿಕಂಡಕ್ಟರ್ , ಚಿಪ್ ಉದ್ಯಮಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಮಹತ್ವ ನೀಡಿದ್ದಾರೆ. ಪ್ರತೀಯೊಂದು ತಾಂತ್ರಿಕ ವಿಚಾರಕ್ಕೆ, ಯೋಜನೆಗೆ ಆವಶ್ಯಕವಾದ ಈ ಕ್ಷೇತ್ರಗಳಲ್ಲಿ ಭಾರತ ಗಮನಾರ್ಹ ಹೆಜ್ಜೆ ಇರಿಸುತ್ತದೆ. ಇದರ ಸದುಪಯೋಗವನ್ನು ನಮ್ಮ ಭವಿಷ್ಯದ ಎಂಜಿನಿಯರ್‌ಗಳು ಪಡೆಯಬೇಕು ಎಂದರು.

ಜಯಶೀಲ್ ಶೆಟ್ಟಿ, ನಿತೀಶ್ ಡಿ'ಸೋಜಾ, ಮಣಿಪಾಲದ ಕರ್ಮ ಡಿಸೈನ್ ಪ್ರೈವೇಟ್ ಲಿಮಿಟೆಡ್‌ನ ಆದಿತ್ಯ ಪೈ, ಎನ್ಐಟಿಕೆ ಸುರತ್ಕಲ್‌ನ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ| ಕಾರ್ತಿಕ್ ತರಫ್ದರ್ ಭಾಗವಹಿಸಿದ್ದರು.

ಇಂಟಿಗ್ರೇಟೆಡ್ ಸರ್ಕ್ಯೂಟ್ ವಿನ್ಯಾಸದಲ್ಲಿ ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡುವ ಬಲವಾದ ಪ್ರಯತ್ನವನ್ನು ಸಂಕೇತಿಸುವ ಸಿಲಿಕಾನ್ ದಂಡಿ ಮಾರ್ಚ್ ಬಗ್ಗೆ ಚರ್ಚೆ ನಡೆಯಿತು.

ಎನ್ಐಟಿಕೆ ನಿರ್ದೇಶಕ ಪ್ರೊ| ಬಿ. ರವಿ ಶುಭ ಹಾರೈಸಿದರು. ಕಾರ್ಯಕ್ರಮ ಸಂಯೋಜಕ ಪ್ರೊ| ಉದಯಕುಮಾರ್ ಆರ್. ಯರಗಟ್ಟಿ ಅಧ್ಯಕ್ಷತೆ ವಹಿಸಿದ್ದರು. ಡೀನ್‌ಗಳು, ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು ಉಪಸ್ಥಿತರಿದ್ದರು. 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅಡಿಪಾಯ ಹಾಕಿದ 'ಇಂಡಿಯಾಸ್ ಟೆಕ್ಡೇಡ್: ಚಿಪ್ಸ್ ಫಾರ್ ವಿಕ್ಷಿತ್ ಭಾರತ್' ಭಾಷಣದ ನೇರ ಪ್ರಸಾರವನ್ನು ಎನ್ಐಟಿಕೆ ಕ್ಯಾಂಪಸ್‌ನಲ್ಲಿ ಪ್ರದರ್ಶಿಸಲಾಯಿತು.

Udayavani, Date:21/03/24, p, no - 04